ಕರ್ನಾಟಕ ಸರ್ಕಾರ

***ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಐವಾನ್-ಎ-ಶಾಹಿ- ಬಡಾವಣೆ ಕಲಬುರಗಿ***

ಸಂಖ್ಯೆ:ಸಿ2(1)ಆಡಳಿತ:ಸಿ–ವಲಯ:ಖಾಹುಸ್ಥ:02:2022–23 ದಿನಾಂಕ: 01/10/2022.

**ಜ್ಞಾಪನ**

**ವಿಷಯ:**–ದಿನಾಂಕ: 21/06/2022 ರಂದು ಸಹ ಶಿಕ್ಷಕರ ಹುದ್ದೆಯಿಂದ ಗ್ರೂಪ್–ಬಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ–32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿದ ಸಹ ಶಿಕ್ಷಕರಿಗೆ ಸ್ಥಳ ನಿಯುಕ್ತಿಗಾಗಿ "ಸಿ" ವಲಯದ ಹುದ್ದೆಗಳನ್ನು ತೆರವುಗೊಳಿಸಲು ಗಣಕೀಕೃತ ಕೌನ್ಸಿಲಿಂಗ ಮೂಲಕ ಘಟಕದೊಳಗಿನ ವರ್ಗಾವಣೆ ಮಾಡುವ ಬಗ್ಗೆ

**ಉಲ್ಲೇಖ:**–01)ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ:12:ಶಾಸನ:2020 ದಿನಾಂಕ: 27/03/2020.
02)ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ:08:ಇಟಿಆರ್:2020 ದಿನಾಂಕ: 22/07/2020.
03)ಈ ಕಛೇರಿ ಜ್ಞಾಪನ ಸಂಖ್ಯೆ:ಸಿ2(1)ಆಡಳಿತ:ಮುಶಿ:ಬಡ್ತಿ:26:2021–22 ದಿನಾಂಕ: 21/06/2022.

*********

ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020 ಜಾರಿಗೆ ಬಂದಿರುತ್ತದೆ. ಇದರಡಿ ಉಲ್ಲೇಖ (2)ರ ಸರ್ಕಾರದ ಆಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020ನ್ನು ರೂಪಿಸಲಾಗಿದೆ.

ದಿನಾಂಕ: 01.01.2022ರಲ್ಲಿದ್ದಂತೆ ಕಲಬುರಗಿ ವಿಭಾಗದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಹಾಗೂ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರು ಹಾಗೂ ತತ್ಸಮಾನ ವೃಂದದ 128 ಜನ ಶಿಕ್ಷಕರಿಗೆ, ಉಲ್ಲೇಖ (03)ರನ್ವಯ ಗ್ರೂಪ್–ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಹುದ್ದೆಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ–32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ.

ಮುಂದುವರೆದು ಸದರಿ ಸಹ ಶಿಕ್ಷಕರಿಗೆ ಕರ್ನಾಟಕ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಪ್ರಕರಣ 3(1) ರನ್ವಯ ಸದರಿ ಮುಖ್ಯ ಶಿಕ್ಷಕರಿಗೆ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ "ಸಿ" ವಲಯದಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಬೇಕಾಗಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಅಂದರೆ "ಸಿ" ವಲಯದಲ್ಲಿ ಸ್ಥಳನಿಯುಕ್ತಿಗೊಳಿಸಲು ಸಾಕಷ್ಟು ಹುದ್ದೆಗಳು ಲಭ್ಯವಿಲ್ಲದ ಪ್ರಯುಕ್ತ ಕರ್ನಾಟಕ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಪ್ರಕರಣ 3(2) ರನ್ವಯ "ಬಿ" ಮತ್ತು "ಸಿ" ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಆ ವಲಯದಲ್ಲಿ ವರ್ಗಾವಣೆ ಕಾಯ್ದೆಯನ್ವಯ ಕನಿಷ್ಟ ಸೇವಾವಧಿಯನ್ನು ಪೂರೈಸಿದ ಮುಖ್ಯ ಶಿಕ್ಷಕರಿಗೆ ಅನುಕ್ರಮವಾಗಿ "ಎ" ವಲಯದ ಹುದ್ದೆಗಳಿಗೆ ಹಾಗೂ "ಸಿ" ವಲಯದಿಂದ "ಎ" ಮತ್ತು "ಬಿ" ವಲಯಗಳಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳನ್ನು ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ ನಿಯಮಗಳು 2020 ರನ್ವಯ ನಡೆಸಲು ತೀರ್ಮಾನಿಸಿದೆ. ವರ್ಗಾವಣೆ ಬಯಸುವವರು ಆನ್–ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಖುದ್ದಾಗಿ, ಅಥವಾ ಟಪಾಲು

ಮೂಲಕ ಅಥವಾ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಪ್ರಕರಣ 3(2)ರಡಿ ಕಲ್ಪಿಸಿದ ಅವಕಾಶದಂತೆ ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020ರನ್ವಯ "ಸಿ" ಮತ್ತು "ಬಿ" ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ವರ್ಗಾವಣೆಗಳಿಗೆ ಈ ಕೆಳಗಿನಂತೆ ವೇಳಾ ಪಟ್ಟಿಯನ್ನು ನಿಗದಿಪಡಿಸಲಾಗಿದೆ.

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 01 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ | 01/10/2022 | ಅಪರ ಆಯುಕ್ತರು,<br>ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ |
| 02 | ವರ್ಗಾವಣೆ ಕೋರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳು ಅಂತರ್ಜಾಲದ (On line) ಮೂಲಕ ವರ್ಗಾವಣೆ ಆದ್ಯತೆಗೆ ನಿಗಧಿಪಡಿಸಿರುವ ದಾಖಲೆಗಳನ್ನು / ಪ್ರಮಾಣ ಪತ್ರದೊಂದಿಗೆ ಇಲಾಖೆ ನಿಗಧಿ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | ದಿ:06/10/2022<br>ರಿಂದ<br>ದಿ:27/10/2022 | "ಬಿ" ಮತ್ತು "ಸಿ" ವಲಯದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳು ಮಾತ್ರ |
| 03 | ಅರ್ಜಿಗಳ ಪರಿಶೀಲನೆ ಮತ್ತು ಅನುಮೋದನೆ: ಸೇವಾ ದಾಖಲೆಗಳೊಂದಿಗೆ ತಾಳೆ ನೋಡಿ ಅಂತರ್ಜಾಲದಲ್ಲಿ (ಆನ್–ಲೈನ್) ಅರ್ಜಿಗಳನ್ನು ಪರಿಶೀಲಿಸಿ ಮಾಹಿತಿಯನ್ನು ದೃಢೀಕರಿಸಿ ಆನ್–ಲೈನ್ ನಲ್ಲಿ ಅರ್ಜಿಗಳನ್ನು ಅನುಮೋದಿಸಲು ನಿಗದಿಪಡಿಸಿರುವ ಅವಧಿ | ದಿ:06/10/2022<br>ರಿಂದ<br>ದಿ:31/10/2022 | ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳು ಅರ್ಜಿ ಸಲ್ಲಿಸಿದ ನಂತರ ಎರಡು ದಿನಗಳ ಒಳಗಾಗಿ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರ ಕಛೇರಿಗೆ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗುವುದು.<br>ಕ್ರಮ: ಉಪ ನಿರ್ದೇಶಕರು(ಆಡಳಿತ)ರವರು |
| 04 | ವಿಭಾಗದ ಒಳಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ಕರಡು ಅರ್ಹ ಮತ್ತು ಅನರ್ಹ ಆದ್ಯತಾ ಪಟ್ಟಿ ಪ್ರಕಟಣೆ (ತಂತ್ರಾಂಶದಲ್ಲಿದ್ದಂತೆ) | 04/11/2022 | ವಿಭಾಗದ ಎಲ್ಲಾ<br>ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |

| | | | |
|---|---|---|---|
| 05 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ | ದಿ:05/11/2022 ರಿಂದ ದಿ:14/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ)ರವರ ಹಂತದಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸುವುದು. |
| 06 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ಮತ್ತು ಓಪನ್ ಹೀಯರಿಂಗ ಮಾಡಲು ನಿಗದಿಪಡಿಸಿರುವ ಅವಧಿ | ದಿ:15/11/2022 ರಿಂದ ದಿ:21/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |
| 07 | ಕುಂದುಕೊರತೆಗಳ ಆಲಿಕೆ: | 22/11/2022 | ಸಹ ನಿರ್ದೇಶಕರು(ಆಡಳಿತ), ಅಪರ ಆಯುಕ್ತರ ಕಛೇರಿ, ಕಲಬುರಗಿ ಇವರು ವರ್ಗಾವಣೆಗೆ ಸಂಬಂಧಿಸಿದ ಆಕ್ಷೇಪಣೆಗಳು ಸಲ್ಲಿಕೆಯಾದಲ್ಲಿ ಆಲಿಸಿ ಅಂತಿಮಗೊಳಿಸುವುದು. |
| 08 | ವಿಭಾಗದ ಒಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಮುಖ್ಯ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಹಾಗೂ ಮೇಲ್ಮನವಿಯಲ್ಲಿ ಬಂದಿರುವ ನಿರ್ದೇಶನಗಳನುಸಾರ ಅರ್ಜಿಗಳ ಇಂದೀಕರಣ ಮತ್ತು ಅಂತಿಮ ಅರ್ಹ ಆದ್ಯತಾ ಪಟ್ಟಿ ಹಾಗೂ "ಎ" ಮತ್ತು "ಬಿ" ವಲಯದಲ್ಲಿ ಖಾಲಿ ಇರುವ ಗ್ರೂಪ್-ಬಿ ಮುಖ್ಯ ಶಿಕ್ಷಕರು/ತತ್ಸಮಾನ ಹುದ್ದೆಗಳ ಪಟ್ಟಿ ಪ್ರಕಟಣೆ. | 24/11/2022 | ಜಿಲ್ಲಾ ಉಪ ನಿರ್ದೇಶಕರು (ಆಡಳಿತ) |
| 09 | ವಲಯವಾರು ಖಾಲಿ ಹುದ್ದೆಗಳ ಮಾಹಿತಿನ್ನು ನಿಗಧಿಪಡಿಸಿರುವ ತಂತ್ರಾಂಶದಲ್ಲಿ ಭರ್ತಿ ಮಾಡುವುದು | 24/11/2022 ರ ವರೆಗೆ | 1 ವಿಭಾಗದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)<br>2 ಅಪರ ಆಯುಕ್ತರ ಕಛೇರಿ |

| | | | |
|---|---|---|---|
| 10 | ಕಲಬುರಗಿ ಆಯುಕ್ತರ ವ್ಯಾಪ್ತಿಯಲ್ಲಿ ಘಟಕದೊಳಗೆ ಕೋರಿಕೆ ವರ್ಗಾವಣೆಗಳಿಗೆ ಆನ್–ಲೈನ್ ಕೌನ್ಸಲಿಂಗ್.<br>• 'ಬಿ' ವಲಯದ ಶಿಕ್ಷಕರಿಗೆ 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ<br>• 'ಸಿ' ವಲಯದಿಂದ 'ಎ' & 'ಬಿ' ವಲಯಕ್ಕೆ ವರ್ಗಾವಣೆ ಕೌನ್ಸಿಲಿಂಗ | 29/11/2022 | ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ<br><br>**ಆಯುಕ್ತರ ಕಛೇರಿ ಸಭಾಂಗಣ** |
| 11 | ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿದ ನೌಕರರಿಗೆ ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ ನಡೆಸುವ ದಿನಾಂಕ | 01/12//2022 | **ಆಯುಕ್ತರ ಕಛೇರಿ ಸಭಾಂಗಣ** |

**ವರ್ಗಾವಣೆ ಅರ್ಜಿಗಳು:** ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ:08:ಇಟಿಆರ್:2020 ದಿನಾಂಕ:22/07/2020. ರ ನಿಯಮ 11ರಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್–ಬಿ ವೃಂದ ಹಾಗೂ ತತ್ಸಮಾನ ವೃಂದಕ್ಕೆ ಸಂಬಂಧಪಟ್ಟ ವರ್ಗಾವಣೆ ಅರ್ಜಿ ನಮೂನೆಯನ್ನು ಇಲಾಖೆಯ ಅಂತರ್ ಜಾಲ: www. cpikalaburgi. karnataka.gov.in & **schooleducation.kar.nic.in** ದಲ್ಲಿ ಪ್ರಕಟಿಸಲಾಗುತ್ತದೆ.

**ವರ್ಗಾವಣೆ ಅರ್ಜಿ ಸಲ್ಲಿಸುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್–ಬಿ ವೃಂದದವರಿಗೆ ಸೂಚನೆಗಳು:**

4. **ಘಟಕದೊಳಗಿನ ಕೋರಿಕೆ ವರ್ಗಾವಣೆಗೆ On line ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ:** "ಬಿ" ಮತ್ತು "ಸಿ" ವಲಯದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ಪ್ರಾಂಶುಪಾಲರು, ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದ ಉಪನ್ಯಾಸಕರು (ಹಾಗೂ ಇಲಾಖೆಯ ವಿವಿಧ ಕಛೇರಿಗಳಲ್ಲಿ "ಸಿ" ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು) ಕೋರಿಕೆ ಮೇಲೆ ವರ್ಗಾವಣೆಗೆ, ಅರ್ಜಿ ಸಲ್ಲಿಸುವುದಾದಲ್ಲಿ

   - ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಆನ್–ಲೈನ್‌ನಲ್ಲಿ ಶಿಕ್ಷಕ ಮಿತ್ರ/ಇಇಡಿಎಸ್ ತಂತ್ರಾಂಶದ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕು ಮತ್ತು ನಿಗದಿಪಡಿಸಿದ ದಿನಾಂಕದ ಒಳಗಾಗಿ ಉಪ ನಿರ್ದೇಶಕರು(ಆಡಳಿತ) ರವರಿಗೆ ಆದ್ಯತಾ ಪ್ರಕರಣ ಪರಿಶೀಲನೆಗೆ ಮೂಲ ದಾಖಲೆಗಳೊಂದಿಗೆ ಹಾಜರಾಗಿ ಸ್ವೀಕೃತಿ ಪಡೆಯತಕ್ಕದ್ದು.

- ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರವೆಂದು ಘೋಷಣೆಯಾಗಿರತಕ್ಕದ್ದು ಆದೇಶದ ಪ್ರತಿ ಲಗತ್ತಿಸುವುದು
- ವರ್ಗಾವಣೆ ಬಯಸುವ ಮುಖ್ಯ ಶಿಕ್ಷಕರು ಅರ್ಜಿ ಸಲ್ಲಿಸಲು 01/10/2022ಕ್ಕೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು.
- ಕರ್ನಾಟಕ ರಾಜ್ಯ ಸಿವ್ಹಿಲ್ ಸಿವ್ಹಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ ಅಧಿನಿಯಮ-2020(ಕರ್ನಾಟಕ ಅಧಿನಿಯಮ ಸಂಖ್ಯೆ-04ರ ಪ್ರಕರಣ 2(ಡಿ) ಪ್ರಕಾರ ಕನಿಷ್ಠ ಸೇವಾವಧಿ ಎಂದರೆ ಮರುನಿಯೋಜನೆ ಹೊಂದಿರುವ ಶಾಲೆಯಲ್ಲಿ ಸಲ್ಲಿಸಿದ ಸೇವೆಯೂ ಒಳಗೊಂಡಂತೆ 03 ವರ್ಷಗಳ ನಿರಂತರ ಸೇವೆ ಎಂದು ಸ್ಪಷ್ಟಪಡಿಸಿರುವುದನ್ನು ತಪ್ಪದೇ ಪಾಲಿಸುವುದು.
- ಉಲ್ಲೇಖ (1)ರ ಅಧಿನಿಯಮ ಜಾರಿಯಾದ ನಂತರದಲ್ಲಿ ಆದ್ಯತೆಯನ್ನು ಇಡೀ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಪಡೆಯಲು ನಿಯಮಗಳಲ್ಲಿ ಅವಕಾಶವಿರುತ್ತದೆ.
- ಆದ್ಯತೆಯನ್ನು ಕಾಲಮಿತಿಯೊಳಗೆ ಕ್ಲೇಮು ಮಾಡದಿದ್ದರೆ, ಆಗ ಅದನ್ನು ನಂತರದ ಹಂತದಲ್ಲಿ ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಇಂತಹ ಅರ್ಜಿಗಳನ್ನು ಸಾಮಾನ್ಯ ಪ್ರಕರಣದಡಿ ಪರಿಗಣಿಸಲಾಗುವುದು.

5. **ಕೋರಿಕೆ ವರ್ಗಾವಣೆಗೆ ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು:** ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಅನ್ವಯ ಹಾಗೂ ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020 ರಲ್ಲಿನ ನಿಯಮ 10 ರಲ್ಲಿ ನಿರ್ದಿಷ್ಟಪಡಿಸಿರುವ ಆದ್ಯತೆಗಳ ಆಯ್ಕೆಯನ್ನು ಚಲಾಯಿಸಿ ಅರ್ಜಿ ಸಲ್ಲಿಸಬಹುದು. ಹಾಗೂ ಕೋರಿರುವ ಆಧ್ಯತೆಯ ಕುರಿತು ನಿಯಮಗಳಲ್ಲಿ ಸ್ಪಷ್ಟಪಡಿಸಿರುವ ಸಕ್ಷಮ ಪ್ರಾಧಿಕಾರಗಳಿಂದ ಪ್ರಮಾಣ ಪತ್ರಗಳನ್ನು ಪಡೆದು ವರ್ಗಾವಣಾ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅರ್ಜಿಯೊಂದಿಗೆ ಅಪ್‌ಲೋಡ ಮಾಡುವುದು ಕಡ್ಡಾಯವಾಗಿರುತ್ತದೆ. ಶಿಕ್ಷಕರು ಒಂದಕ್ಕಿಂತ ಹೆಚ್ಚು ಆದ್ಯತೆಗಳನ್ನು ವರ್ಗಾವಣೆ ಅರ್ಜಿಯಲ್ಲಿ ಆಯ್ಕೆ ಮಾಡಲು ಅವಕಾಶ ನೀಡಲಾಗಿದೆ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ನೀಡತಕ್ಕದ್ದು. ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಕೌನ್ಸಿಲಿಂಗ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು. ಆದ್ಯತಾ ಪ್ರಕರಣಗಳ ವಿವರ ಕೆಳಗಿನಂತಿರುತ್ತದೆ.

6. **ಆದ್ಯತೆಗಳ ವಿವರ ಮತ್ತು ಸಲ್ಲಿಸಬೇಕಾದ ಪ್ರಮಾಣ ಪತ್ರಗಳ ವಿವರ ಕೆಳಕಂಡಂತಿರುತ್ತದೆ.**

| ಕ್ರಸಂ | ಆದ್ಯತೆ ಕ್ಲೇಮು | ಸಲ್ಲಿಸಬೇಕಾದ ಪೂರಕ ದಾಖಲೆಗಳು |
|---|---|---|
| 1 | ತಾಲೂಕಿನೊಳಗೆ ಚಿಕಿತ್ಸೆ ಸಿಗದಿರುವ ಮಾರಕ ಕಾಯಿಲೆ ಅಥವಾ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ಮುಖ್ಯ ಶಿಕ್ಷಕರು/ಶಿಕ್ಷಕಿ ಅಥವಾ ಅವರ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ |
| 2 | ಶೇ. 40 ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯತೆಯಿರುವ ಮುಖ್ಯ ಶಿಕ್ಷಕ/ಶಿಕ್ಷಕಿ ಅಥವಾ ಅವರ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ |
| 3 | 12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳು ಇರುವ ವಿಧವೆ/ವಿಧುರ ಅಥವಾ ವಿವಾಹ ವಿಚ್ಛೇದಿತ ಮುಖ್ಯ ಶಿಕ್ಷಕ/ ಮುಖ್ಯ ಶಿಕ್ಷಕಿ | ಶಿಕ್ಷಕರ ಪತಿ ಅಥವಾ ಪತ್ನಿ ಮರಣ ಪ್ರಮಾಣ ಪತ್ರ/ನ್ಯಾಯಾಲಯದ ಡಿಕ್ರಿ/ಮುಸಲ್ಮಾನರಾಗಿದ್ದಲ್ಲಿ ಮಸೀದಿ ಸಮಿತಿಯಿಂದ ನೀಡಲಾದ ಖುಲಾನಾಮಾ, ತಲಾಖ-ನಾಮ್ |

| | | |
|---|---|---|
| | | ಅಥವಾ ತಲಾಖ್-ಇ-ಮುಬಾರತ್ ಮತ್ತು ಮರುವಿವಾಹ ಮಾಡಿಕೊಳ್ಳದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ ಹಾಗೂ ಮಗುವಿನ ವಯಸ್ಸು ದೃಢೀಕರಿಸುವ ದಾಖಲೆ |
| **4** | ಭಾರತೀಯ ರಕ್ಷಣಾ ದಳಗಳು ಅಥವಾ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ ಶಿಕ್ಷಕ | ಕಮಾಂಡಿಂಗ ಆಫಿಸರ್ ಅಥವಾ ನಿರ್ದೇಶಕರು, ಸೈನಿಕ ಕಲ್ಯಾಣ ಮಂಡಳಿಯಿಂದ ಪ್ರಮಾಣ ಪತ್ರ. |
| **5** | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅನುದಾನಿತ ಶೈಕ್ಷಣೀಕ ಸಂಸ್ಥೆಯ ನೌಕರರನ್ನು ವಿವಾಹವಾಗಿರುವ ಶಿಕ್ಷಕ ಅಥವಾ ಶಿಕ್ಷಕಿ. | ಶಿಕ್ಷಕರ ಪತಿ/ಪತ್ನಿ ಕರ್ತವ್ಯ ನಿರ್ವಹಿಸುತ್ತಿರುವ ನೇಮಕಾತಿ ಪ್ರಾಧಿಕಾರದಿಂದ ಸೇವಾ ಪ್ರಮಾಣ ಪತ್ರ. |

ಮೇಲ್ಕಂಡ ಕ್ರಮ ಸಂಖ್ಯೆ 1 & 2ರ ಆದ್ಯತೆ ಬಯಸುವ ಶಿಕ್ಷಕರು ದಿನಾಂಕ: 01/10/2022ರೊಳಗೆ ಪಡೆದ ದೃಢೀಕರಣ ಪತ್ರಗಳನ್ನು ಮಾತ್ರ ಸಲ್ಲಿಸುವುದು. ಕ್ರಮ ಸಂಖ್ಯೆ 3ರ ಆದ್ಯತೆ ಬಯಸುವ ಶಿಕ್ಷಕರು ಮರುವಿವಾಹ ಮಾಡಿಕೊಳ್ಳದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ ಹಾಗೂ ಮಗುವಿನ ವಯಸ್ಸು ದೃಢೀಕರಿಸುವ ದಾಖಲೆ ಮತ್ತು ಕ್ರಮ ಸಂಖ್ಯೆ 4 ಮತ್ತು 5ರ ಆದ್ಯತೆ ಬಯಸುವ ಶಿಕ್ಷಕರು ಇತ್ತೀಚೆಗೆ ಪಡೆದ ದೃಢೀಕರಣ ಪತ್ರಗಳನ್ನು ಸಲ್ಲಿಸುವುದು.

**3(ಅ) ಕರ್ನಾಟಕ ರಾಜ್ಯ ಸಿವ್ವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020(2020ರ ಕರ್ನಾಟಕ ಅಧಿನಿಯಮ ಸಂಖ್ಯೆ-4)ರ ಸೆಕ್ಷನ್ 10 ರಂತೆ ಕೋರಿಕೆ ವರ್ಗಾವಣೆಗಳಿಗೆ ಷರತ್ತುಗಳಿಗೊಳಪಟ್ಟು ಆದ್ಯತೆಯು ಈ ಮುಂದಿನಂತಿದೆ.**

**(i)** ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ ಅಥವಾ ಮಕ್ಕಳು, ಶಿಕ್ಷಕನ್ನು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಚಿಕಿತ್ಸೆಯು ಲಭ್ಯವಿಲ್ಲದ ಕೊನೆಯ ಹಂತದ ಖಾಯಿಲೆ ಅಥವಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ.

**(ii)**ಅಂಗವೈಕಲ್ಯಗಳುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 49) 2ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ಅಂಗವೈಕಲ್ಯದ ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ ಅಥವಾ ಮಕ್ಕಳು:

**(iii)**12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ವಿಧುರ ಅಥವಾ ವಿಚ್ಛೇದಿತ ಶಿಕ್ಷಕ:

**(iv)**ಭಾರತೀಯ ರಕ್ಷಣಾ ದಳಗಳು ಅಥವಾ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ ಶಿಕ್ಷಕರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

(v)ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವವರ ಪತಿ ಅಥವಾ ಪತ್ನಿಯಾಗಿರುವ ಶಿಕ್ಷಕರು:

3) ಮೇಲಿನ ಕೋಷ್ಟಕದ (1) ರಿಂದ (5)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಕೋರಿಕೆ ವರ್ಗಾವಣೆಯಡಿಯಲ್ಲಿ ಆದ್ಯತೆಗೆ ಅರ್ಹರಾಗತಕ್ಕದ್ದು. ಆದ್ಯತೆಗಳನ್ನು ಶಿಕ್ಷಕರ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರವೇ ಕ್ಲೇಮು ಮಾಡತಕ್ಕದ್ದು.
4) ಮೇಲಿನ ಕೋಷ್ಟಕದ (5)ನೇ ಪ್ರವರ್ಗದ ಅಡಿಯಲ್ಲಿ ಬರುವ ಶಿಕ್ಷಕರಿಗೆ ಕೋರಿಕೆ ವರ್ಗಾವಣೆಯ ಅವಧಿಯಲ್ಲಿ ಪ್ರಾಶಸ್ತ್ಯವನ್ನು ನೀಡತಕ್ಕದ್ದು. ಶಿಕ್ಷಕನು , ಆತನ ಪತ್ನಿ ಅಥವಾ ಆಕೆಯ ಪತಿಯೂ ಕಾರ್ಯನಿರ್ವಹಿಸುತ್ತಿರುವ ತಾಲೂಕಲ್ಲದೆ ಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲೂಕಿಗೆ ಮಾತ್ರವೇ ವರ್ಗಾವಣೆಯನ್ನು ಕೋರುವುದಕ್ಕೆ ಅನುಮತಿಸಬಹುದು. ಇಬ್ಬರೂ ಅದೇ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆಗ ಆದ್ಯತೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಿರುವುದಿಲ್ಲ.

4) ಕೋರಿಕೆ ವರ್ಗಾವಣೆಗಳಿಗೆ ಶಿಕ್ಷಕರು ಸಲ್ಲಿಸಿರುವ ಸೇವೆಯನ್ನು ಆಧರಿಸಿ ಸೇವಾ ಅಂಕಗಳು (ವೇಯ್ಟೆಡ್ ಅಂಕಗಳು) ಕೆಳಕಂಡಂತೆ ನಿಗದಿಪಡಿಸಿದೆ.

ಶಿಕ್ಷಕರ ಸೇವಾ ಅಂಕಗಳ ಲೆಕ್ಕಾಚಾರ:

(ಎ) ಶಿಕ್ಷಕರ ವರ್ಗಾವಣೆ ಉದ್ದೇಶಕ್ಕಾಗಿ=(ಸಿ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ*3 ಅಂಕ)+(ಬಿ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ * 2 ಅಂಕ)+(ಎ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ * 1 ಅಂಕ)+( ಮೂರು ವರ್ಷಗಳಿಗೆ ಮೀರಿ ಹಾಲಿ ಶಾಲೆಯಲ್ಲಿ ಸಲ್ಲಿಸದ ಸೇವೆಯ ವರ್ಷಗಳ ಸಂಖ್ಯೆ * 1 ಅಂಕ)

ಟಿಪ್ಪಣಿ: ಆರು ತಿಂಗಳ (180 ದಿನಗಳ ) ಹಾಗೂ ಮೇಲಿನ ಸೇವೆಯನ್ನು ಒಂದು ಪೂರ್ಣ ವರ್ಷವೆಂದು ಪರಿಗಣಿಸತಕ್ಕದ್ದು. ಆರು ತಿಂಗಳಿಗಿಂತ (180 ದಿನಗಳು)"ಶೂನ್ಯ ವರ್ಷದ" ಸೇವೆಯೆಂದು ಪರಿಗಣಿಸತಕ್ಕದ್ದು. ಎಲ್ಲಾ ಅಂಕಗಳನ್ನು ವರ್ಗಾವಣೆ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಲೆಕ್ಕ ಹಾಕುವುದು.

5) ವರ್ಗಾವಣಾ ಅರ್ಜಿಗಳ ಕುರಿತು ಉಪ ನಿರ್ದೇಶಕರು ವಹಿಸಬೇಕಾದ ಕ್ರಮಗಳು:

ಎ) ಮುಖ್ಯ ಶಿಕ್ಷಕರು/ತತ್ಸಮಾನ ವೃಂದದವರು ಆನ್-ಲೈನ್ ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು(ಹೆಸರು, ಜನ್ಮ ದಿನಾಂಕ, ಪದನಾಮ, ಶಾಲೆ, ಕಾಲೇಜು, ಕಛೇರಿ ವಿಳಾಸ, ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಸೇವೆಯ ಶಾಲಾವಾರು ವಿವರ ಬಯಸಿರುವ ಆದ್ಯತೆ, ಇತ್ಯಾದಿ) ಸರಿಯಿದೆಯೇ? ಎಂಬುದನ್ನು ಸಂಬಂಧಿಸಿದ ಉಪ ನಿರ್ದೇಶಕರು(ಆಡಳಿತ)ರವರು ಅರ್ಜಿ ಸಲ್ಲಿಸಿರುವ ಶಿಕ್ಷಕರ ಸೇವಾ ವಹಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

ಬಿ) ಆಯಾ ವೃಂದದಲ್ಲಿ ಸಲ್ಲಿಸಿದ ಸೇವೆ, ಕರ್ನಾಟಕ ರಾಜ್ಯ ಸಿವ್ಹಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 (ಕರ್ನಾಟಕ ಅಧಿನಿಯಮ ಸಂಖ್ಯೆ:04)ರ ಪ್ರಕರಣ 2(ಡಿ) ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ.ಬಿ.ಸಿ ವಲಯಗಳ ಪ್ರಕಾರ ಪ್ರಸುತ್ತ ವೃಂದದಲ್ಲಿನ ಎಲ್ಲಾ ಸ್ಥಳಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪ್ರಸ್ತುತ ದಿನಾಂಕದವರೆಗೆ ಸರಿಯಾಗಿ ದಾಖಲು ಮಾಡಿದ್ದಾರೆಯೇ ಎಂಬ ಬಗ್ಗೆಯೂ ಸಹ ಸಂಬಂಧಿಸಿದ ಉಪ ನಿರ್ದೇಶಕರು(ಆಡಳಿತ)ರವರು ಶಿಕ್ಷಕರ ಮಿತ್ರ/ಇಇಡಿಎಸ್ ತಂತ್ರಾಂಶದಲ್ಲಿ ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು.

ಸಿ) **ಆದ್ಯತಾ ಪ್ರಮಾಣ ಪತ್ರಗಳ ಪರಿಶೀಲನೆ: ಸಕ್ಷಮ** ಪ್ರಾಧಿಕಾರವು ಆದ್ಯತೆ ಬಯಸಿ ಸಲ್ಲಿಸಿರುವ ಶಿಕ್ಷಕರ ಅರ್ಜಿಗಳನ್ನು ಅವರು ಸಲ್ಲಿಸಿರುವ ಮೂಲ ಪ್ರಮಾಣ ಪತ್ರಗಳೊಂದಿಗೆ ಪರಿಶೀಲಿಸಿ, ಆದ್ಯತೆಗೆ ಅರ್ಹವಿದ್ದಲ್ಲಿ ಮಾತ್ರ ಪರಿಗಣಿಸತಕ್ಕದ್ದು. ಇಲ್ಲವಾದಲ್ಲಿ ಸಕಾರಣಗಳೊಂದಿಗೆ ತಿರಸ್ಕರಿಸತಕ್ಕದ್ದು. ಸದರಿ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿಯೇ ನಿರ್ವಹಿಸುವುದು.

ಡಿ) **ಕರಡು ಅರ್ಹ/ಅನರ್ಹ ಪಟ್ಟಿ ಪ್ರಕಟಣೆ:** ತಂತ್ರಾಂಶದಲ್ಲಿ ಜನರೇಟ ಮಾಡಿದ ಕರಡು ಅರ್ಹ ಆದ್ಯತಾ ಪಟ್ಟಿ ಮತ್ತು ಕರಡು ಅನರ್ಹ (ಕಾರಣಗಳ ಸಹಿತ) ಆದ್ಯತಾ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಈ ಸಂಬಂಧ ಮಾಹಿತಿಯು ಶಿಕ್ಷಕ ಮಿತ್ರ ಆಪ್‌ನಲ್ಲಿ/ಇಇಡಿಎಸ್‌ನಲ್ಲಿ ಲಭ್ಯವಾಗುವ ಬಗ್ಗೆ ಪ್ರಚುರಪಡಿಸವುದು.

ಎಫ್) **ಆಕ್ಷೇಪಣೆಗಳ ಸ್ವೀಕೃತಿ: ಕರಡು ಅರ್ಹ/ಅನರ್ಹ ಆದ್ಯತಾ ಪಟ್ಟಿಗಳಿಗೆ** ಐದು ಕೆಲಸದ ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡುವುದು. ಸ್ವೀಕೃತವಾದ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯವರು ನಿಯಮಾನುಸಾರ ಪರಿಶೀಲಿಸುವುದು. ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಲು ಮುಕ್ತ ಆಲಿಕೆಗೆ ದಿನಾಂಕವನ್ನು ನಿಗದಿಪಡಿಸಿ, ಪ್ರಕಟಿಸಿ ಪ್ರಚುರಪಡಿಸುವುದು. 05 ದಿನಗಳ ತರುವಾಯ ಬಂದ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

ಜಿ) ಅಕ್ಷೇಪಣೆಗಳನ್ನು ಇತ್ಯರ್ಥಪಡಿಸುವುದು: 05 ದಿನಗಳ ಅವಧಿಯಲ್ಲಿ ಸ್ವೀಕೃತವಾದ **ಆಕ್ಷೇಪಣೆಗಳನ್ನು ಪರಿಶೀಲಿಸಿ ಆದೇಶಗಳನ್ನು ಹೊರಡಿಸುವುದು. ಮತ್ತು ತಂತ್ರಾಂಶದಲ್ಲಿ ಅಂತಿಮ ಅರ್ಹ/ಅನರ್ಹ ಆಧ್ಯತೆಗಳನ್ನು ಇಂದೀಕರಿಸುವುದು.**

**ಹೆಚ್) ತಂತ್ರಾಂಶದ ಮೂಲಕ ಜನರೇಟ್ ಮಾಡಿದ ಅಂತಿಮ ಅರ್ಹ ಆದ್ಯತಾ ಪಟ್ಟಿಯನ್ನು ಪ್ರಕಟಿಸುವುದು. ಯಾವುದೇ ಶಿಕ್ಷಕರು ಒಂದಕ್ಕಿಂತ ಹೆಚ್ಚು ಆದ್ಯತೆಗೆ ಅರ್ಹರಾಗಿದ್ದಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಸೆಕ್ಷನ್ 10ರ ಅನುಕ್ರಮದಂತೆ ಪರಿಗಣಿಸಲಾಗುವುದು.**

6) **ಕೌನ್ಸಿಲಿಂಗನ್ನು ಪೂರ್ಣಗೊಳಿಸುವುದು: ನಿಯಮ 23 ರಂತೆ ವಲಯ ಮತ್ತು ಕೋರಿಕೆ ವರ್ಗಾವಣೆಗಳ ಮೇರೆಗೆ ಕಂಪ್ಯೂಟರೈಸ್ಡ್ ಕೌನ್ಸಿಲಿಂಗ್** (ವರ್ಗಾವಣಾ ತಂತ್ರಾಂಶ ಮತ್ತು ಇತರೆ ತಂತ್ರಾಂಶದೊಂದಿಗೆ ಸಮ್ಮಿಳಿಸಿ ಆನ್‌-ಲೈನ್ ಮೂಲಕ ನಡೆಸಲಾಗುವುದು) **ಪ್ರಕ್ರಿಯೆ ಮುಖಾಂತರ ವರ್ಗಾವಣೆ ನಿರ್ವಹಣೆಯನ್ನು 128 ಹುದ್ದೆಗಳು ತೆರವಾಗುವವರೆಗೆ ನಡೆಸಲಾಗುವುದು.**

7) **ನಿಯಮ 25 ರಂತೆ ಸಕ್ಷಮ ಪ್ರಾಧಿಕಾರವು ಕೌನ್ಸಿಲಿಂಗ ಕೇಂದ್ರದಲ್ಲಿ ಕೌನ್ಸಿಲಿಂಗ ನಡೆಯುವ ಅದೇ ದಿನದಂದು ಸಂಬಂಧಿಸಿದ ಶಿಕ್ಷಕರಿಗೆ ಕಂಪ್ಯೂಟರ್ ಜನರೇಟೆಡ್ ವರ್ಗಾವಣೆ ಆದೇಶವನ್ನು ನೀಡಲಾಗುವುದು.**

8) **ಕುಂದು ಕೊರತೆಗಳ ನಿವಾರಣೆ:**

ವರ್ಗಾವಣೆ ಅಧಿನಿಯಮ 2020ರ ಕಂಡಿಕೆ 09 ರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು(ಆಡಳಿತ)ರವರನ್ನು ವರ್ಗಾವಣೆ ಪ್ರಕ್ರಿಯೆಯನ್ನು ಮೇಲ್ವಿಚಾರಿಸಲು ಮತ್ತು ಯಾವುದೇ ಲಿಖಿತ ದೂರುಗಳು ಆಲಿಸಲು ಕುಂದು ಕೊರತೆ ನಿವಾರಣಾ ಅಧಿಕಾರಿಯಾಗಿ ಗೊತ್ತುಪಡಿಸಲಾಗಿದೆ. ಹಾಗೂ ಸ್ವೀಕರಿಸಲಾದ ಅಹವಾಲುಗಳಿಗೆ 2 ದಿನಗಳೊಳಗಾಗಿ ಆದೇಶಗಳನ್ನು ಹೊರಡಿಸತಕ್ಕದ್ದು. ಕುಂದು ಕೊರತೆ ಅಧಿಕಾರಿ ಹೊರಡಿಸಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಇವರಲ್ಲಿ ಸಲ್ಲಿಸತಕ್ಕದ್ದು. ಯಾವುದೇ ಅಧಿಕಾರಿಯು ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅದನ್ನು ಸಂಬಂಧಿತ ಶಿಸ್ತು ಪ್ರಾಧಿಕಾರಕ್ಕೆ ವರದಿ ಮಾಡಲಾಗುವುದು.

8) **ಸಹಾಯವಾಣಿ: ವರ್ಗಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಸಂಬಂಧಿಸಿದ ಉಪ ನಿರ್ದೇಶಕರು(ಆಡಳಿತ)ರವರುಗಳ ಕಛೇರಿಗಳಲ್ಲಿರುವ ವರ್ಗಾವಣೆ ಕೋಶದ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯುವುದು.**
**(ಮಾನ್ಯ ಅಪರ ಆಯುಕ್ತರಿಂದ ಅನುಮೋದಿತ ಕರಡು)**

ಜಿ.ಎಂ. ವಿಜಯಕುಮಾರ 01/10/2022
(ಜಿ. ಎಂ. ವಿಜಯಕುಮಾರ)
ಸಹ ನಿರ್ದೇಶಕರು (ಆಡಳಿತ)
ಅಪರ ಆಯುಕ್ತರ ಪರವಾಗಿ

**ಪ್ರತಿಗಳನ್ನು:**

1) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು ರವರ ಅಗತ್ಯ ಕ್ರಮಕ್ಕಾಗಿ
3) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ
4) ಪ್ರಾಂಶುಪಾಲರು, ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಕಲಬುರಗಿ
5) ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ
6) ವಿಭಾಗದ ಎಲ್ಲಾ ಪ್ರಾಚಾರ್ಯರು ಡಯಟ್ ಇವರಿಗೆ.
7) ಈ ಕಛೇರಿಯ ಇ–ಆಡಳಿತ, ಶಾಖೆಯ, ಹಿರಿಯ ಸಹಾಯಕ ನಿರ್ದೇಶಕರು, ಇವರಿಗೆ ನೀಡುತ್ತ, ಇಲಾಖೆಯ ಅಧೀಕೃತ ಅಂತರ್ಜಾಲದಲ್ಲಿ ಅಳವಡಿಸಲು ತಿಳಿಸಿದೆ.